ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

**Email Id: adpiarabic@gamil.com** **Phone No: 080-23460525**

ಸಂಖ್ಯೆ: R1/ಅರೇಬಿಕ್/ಪ.ಕಾ/49/2022-23 ದಿನಾಂಕ: 21/12/2022

## ಅಧಿಸೂಚನೆ

ವಿಷಯ: ಫೆಬ್ರವರಿ 2023ರ ಮಾಹೆಯಲ್ಲಿ ನಡೆಯಲಿರುವ ಅರೇಬಿಕ್ ಪರೀಕ್ಷೆಗೆ ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು Online ಮೂಲಕ ಆಹ್ವಾನಿಸುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಎಂ.ಸಿ.10/ಅರೇ.ಪರೀ.ಅಭಿ/36/2022-23, ದಿನಾಂಕ: 12/10/2022.

************

2022-23ನೇ ಸಾಲಿನ ಅರೇಬಿಕ್ ಪರೀಕ್ಷೆಗಳನ್ನು ಫೆಬ್ರವರಿ 2023ರ ಮಾಹೆಯಲ್ಲಿ ಉಲ್ಲೇಖಿತ ಪತ್ರದಲ್ಲಿ ಸೂಚಿಸಿದಂತೆ ದಿನಾಂಕ 20/02/2023 ರಿಂದ 25/02/2023ರ ವರೆಗೆ ನಡೆಸಲು ವೇಳಾಪಟ್ಟಿಯನ್ನು ನಿಗದಿಪಡಿಸಿದೆ. ಅರೇಬಿಕ್ ಪರೀಕ್ಷೆಗಳಿಗೆ Online ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಅರೇಬಿಕ್ ಶಾಲಾ/ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅರ್ಹ ವಿದ್ಯಾರ್ಥಿಗಳ ವಿವರಗಳನ್ನು ಮಂಡಲಿಯ https://sslc.karnataka.gov.in ಜಾಲತಾಣದಲ್ಲಿ Other Exams Portal/Arabic Examinationನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.

## I. ದಾಖಲಾತಿ ಅನುಮೋದನಾ ಪಟ್ಟಿ:-

- 2022-23ನೇ ಸಾಲಿನಲ್ಲಿ ಸರ್ಕಾರಿ, ಹಾಗೂ ಮಾನ್ಯತೆ ಪಡೆದು ಅಸ್ತಿತ್ವದಲ್ಲಿರುವ ಅನುದಾನಿತ ಹಾಗೂ ಖಾಸಗಿ ಅರೇಬಿಕ್ ಶಾಲಾ ಕಾಲೇಜುಗಳಿಂದ ಇಂದೀಕರಿಸಲಾಗುವ ದಾಖಲಾತಿ ಮಾಹಿತಿಯನ್ನು ಹಾಗೂ ಸಂಬಂಧಿಸಿದ ಸಂಸ್ಥೆಯವರು ಸಲ್ಲಿಸುವ, ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆ ತೆಗೆದುಕೊಳ್ಳುವ ಅರ್ಹ ಅಭ್ಯರ್ಥಿಗಳ ನೋಂದಾಯಿತ ಪಟ್ಟಿಯನ್ನು, ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು ಪಟ್ಟಿಯನ್ನು ಪರಿಶೀಲಿಸಿ ಅನುಮೋದನೆ ನೀಡುವುದು (ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಹಿಂದಿನ ವರ್ಷದ ಅರ್ಹ ವಿದ್ಯಾರ್ಹತೆಯ ಉತ್ತೀರ್ಣ ಅಂಕಪಟ್ಟಿಗಳ ದೃಢೀಕೃತ ಪಟ್ಟಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ).

- ಅರೇಬಿಕ್ ಶಾಲಾ/ಕಾಲೇಜುಗಳಲ್ಲಿ ಅನುದಾನ ಸಂಹಿತೆಯ ನಿಯಮದಂತೆ ಅಭ್ಯರ್ಥಿಗಳ ಸಂಖ್ಯೆಯನ್ನು ಹೊಂದಿರಬೇಕು.

- ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ 50ಕ್ಕಿಂತ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ಸಮೀಪದ ಪರೀಕ್ಷಾ ಕೇಂದ್ರಕ್ಕೆ ಸಂಯೋಜನೆಗೊಳಿಸಲಾಗುವುದು. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.

- ಪುನಾರಾವರ್ತಿತ ಅಭ್ಯರ್ಥಿಯಾಗಿದ್ದಲ್ಲಿ ಈ ಹಿಂದೆ ವ್ಯಾಸಂಗ ಮಾಡಿದ ಶಾಲಾ/ಕಾಲೇಜುಗಳ ಮೂಲಕ ಆನ್‌ಲೈನ್‌ನಲ್ಲಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಬೇಕು.

## II. ಪರೀಕ್ಷಾ ವಿಷಯದ ವಿವರ ಹಾಗೂ ಪರೀಕ್ಷಾ ಅರ್ಹತೆಗಳು:-

| ಕ್ರ ಸಂ | ಪರೀಕ್ಷೆಗಳ ವಿವರ ಹಾಗೂ ಕೋರ್ಸ್ | ಅರ್ಹತೆ | |
|---|---|---|---|
| | | ಹೊಸ ಅಭ್ಯರ್ಥಿ | ಖಾಸಗಿ ಅಭ್ಯರ್ಥಿ |
| 1. | ಉಸ್ತಾನಿಯಾ (2 ವರ್ಷಗಳ ಕೋರ್ಸ್) | ಸದರಿ ಪರೀಕ್ಷೆಯ ಮೊದಲ ವರ್ಷದ ಶಾಲಾ ಹಂತದ ಉಸ್ತಾನಿಯಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br><br>2ನೇ ವರ್ಷದ ಪರೀಕ್ಷೆಯನ್ನು ಮಂಡಳಿ ವತಿಯಿಂದ ನಡೆಸಲಾಗುವುದು. | • ಪರೀಕ್ಷಾ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 12 ವರ್ಷಗಳು ಪೂರ್ಣಗೊಂಡಿರಬೇಕು.<br>• ಕನಿಷ್ಠ 3ನೇ ವರ್ಷದ ತಹತಾನಿಯಾ ಪರೀಕ್ಷೆಯಲ್ಲಿ ಅಥವಾ 04ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.<br>(ತಹತಾನಿಯಾ ಪರೀಕ್ಷೆಯ ಉತ್ತೀರ್ಣ ಪ್ರಮಾಣಪತ್ರವನ್ನು ಲಗತ್ತಿಸಬೇಕು.) |
| 2. | ಫೌಕಾನಿಯಾ (3 ವರ್ಷಗಳ ಕೋರ್ಸ್) | ಸದರಿ ಪರೀಕ್ಷೆಯ ಮೊದಲ ಎರಡು ವರ್ಷಗಳ ಶಾಲಾ ಹಂತದ ಫೌಕಾನಿಯಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು<br><br>3ನೇ ವರ್ಷದ ಪರೀಕ್ಷೆಯನ್ನು ಮಂಡಳಿ ವತಿಯಿಂದ ನಡೆಸಲಾಗುವುದು. | • ಪರೀಕ್ಷಾ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 15 ವರ್ಷಗಳು ಪೂರ್ಣಗೊಂಡಿರಬೇಕು<br>• ಕನಿಷ್ಠ 2ನೇ ವರ್ಷದ ಉಸ್ತಾನಿಯಾ ಪರೀಕ್ಷೆಯಲ್ಲಿ ಅಥವಾ 06ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.<br>(ಉಸ್ತಾನಿಯಾ ಪರೀಕ್ಷೆಯ ಉತ್ತೀರ್ಣ ಪ್ರಮಾಣಪತ್ರವನ್ನು ಲಗತ್ತಿಸಬೇಕು.) |
| 10ನೇ ತರಗತಿಯಲ್ಲಿ ಕನ್ನಡ ಅಥವಾ ಇಂಗ್ಲೀಷ್ ವಿಷಯದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಎಫ್ 6 ವಿಷಯದ ಪರೀಕ್ಷಾ ವಿನಾಯಿತಿ ಇರುತ್ತದೆ (ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣಗೊಂಡ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು). | | | |
| 3. | ಅಫ್ಜಲುಲ್-ಉಲ್ಮಾ ಮಧ್ಯಮ (3 ವರ್ಷಗಳ ಕೋರ್ಸ್) | 2 ವರ್ಷಗಳ ಶಾಲಾ ಹಂತದ ಅಫ್ಜಲುಲ್-ಉಲ್ಮಾ ಮಧ್ಯಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು<br><br>3ನೇ ವರ್ಷದ ಪರೀಕ್ಷೆಯನ್ನು ಮಂಡಳಿ ವತಿಯಿಂದ ನಡೆಸಲಾಗುವುದು. | • 3ನೇ ವರ್ಷದ ಫೌಕಾನಿಯಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳು ಪೂರ್ಣಗೊಂಡಿರಬೇಕು. (ಫೌಕಾನಿಯಾ ಪರೀಕ್ಷೆಯ ಉತ್ತೀರ್ಣ ಪ್ರಮಾಣಪತ್ರವನ್ನು ಲಗತ್ತಿಸಬೇಕು)<br>• ಪರೀಕ್ಷಾ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 18 ವರ್ಷಗಳು ಪೂರ್ಣಗೊಂಡಿರಬೇಕು |
| 4. | ಅಫ್ಜಲುಲ್-ಉಲ್ಮಾ ಉತ್ತಮ ( 2 ವರ್ಷಗಳ ಕೋರ್ಸ್) | ಮೊದಲನೇ ವರ್ಷದ ಶಾಲಾ ಹಂತದ ಅಫ್ಜಲುಲ್-ಉಲ್ಮಾ ಉತ್ತಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು<br><br>2ನೇ ವರ್ಷದ ಪರೀಕ್ಷೆಯನ್ನು ಮಂಡಳಿ ವತಿಯಿಂದ ನಡೆಸಲಾಗುವುದು. | • ಅಫ್ಜಲುಲ್-ಉಲ್ಮಾ ಮಧ್ಯಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 2 ವರ್ಷಗಳ ಪೂರ್ಣಗೊಂಡಿರಬೇಕು. (ಅಫ್ಜಲುಲ್-ಉಲ್ಮಾ ಮಧ್ಯಮ ಪರೀಕ್ಷೆಯ ಪ್ರಮಾಣಪತ್ರವನ್ನು ಲಗತ್ತಿಸಬೇಕು)<br>• ಸರ್ಕಾರದಿಂದ ಮಾನ್ಯತೆ ಪಡೆದ ಅರೇಬಿಕ್ ಕಾಲೇಜುಗಳಿಂದ ಫಾಜಿಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>• ಪರೀಕ್ಷಾ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 20 ವರ್ಷಗಳು ಪೂರ್ಣಗೊಂಡಿರಬೇಕು. |
| • ಅಫ್ಜಲುಲ್-ಉಲ್ಮಾ ಉತ್ತಮ ಪರೀಕ್ಷೆಗೆ ಸಂಬಂಧಿಸಿದಂತೆ ಲಿಖಿತ ಪರೀಕ್ಷೆಗೆ 03 ಗಂಟೆಗಳ ಅವಧಿಯನ್ನು ನಿಗಧಿಪಡಿಸಿದೆ. ಮೌಖಿಕ ಪರೀಕ್ಷೆಗೆ ಯಾವುದೇ ಅವಧಿಯನ್ನು ನಿಗಧಿಪಡಿಸಿರುವುದಿಲ್ಲ. | | | |

- ಮಂಡಳಿಯು ನಿಗಧಿಪಡಿಸಿದ ಕೇಂದ್ರದಲ್ಲಿ ಅನುಮೋದಿಸಿ ನಿಯೋಜಿಸಿದ ಇಬ್ಬರು ವಿಷಯ ಪರೀಕ್ಷಕರು ಮೌಖಿಕ ಪರೀಕ್ಷೆಯನ್ನು ಪ್ರತಿ ಅಭ್ಯರ್ಥಿಗೂ ಪ್ರತ್ಯೇಕವಾಗಿ ನಡೆಸುವುದು. ನಿಯೋಜಿಸಿದ ಪರೀಕ್ಷಕರನ್ನು ಹೊರತು ಪಡಿಸಿ ಬೇರೆ ಯಾವುದೇ ಪರೀಕ್ಷಕರನ್ನು ನೇಮಿಸಿಕೊಳ್ಳುವಂತಿಲ್ಲ.
- ಸದರಿ ಇಬ್ಬರು ಶಿಕ್ಷಕರು ಪ್ರತ್ಯೇಕವಾಗಿ ಅಂಕಗಳನ್ನು ನೀಡಿ ಎ.ಎಂ.ಎಲ್.ಗಳಲ್ಲಿ ಕಡ್ಡಾಯವಾಗಿ ನಮೂದಿಸುವುದು. ಸಂಬಂಧಿಸಿದ ಎ.ಎಂ.ಎಲ್ ಹಾಗೂ ಅಂಕ ತ:ಖ್ತೆಗಳನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸಲ್ಲಿಸುವುದು ಮತ್ತು ಪರೀಕ್ಷಾ ಮುಖ್ಯಸ್ಥರು ಸದರಿ ದಾಖಲೆಗಳನ್ನು ಮಂಡಳಿಗೆ ಸಲ್ಲಿಸುವುದು.
- ಮೇಲೆ ಸೂಚಿಸಲಾದ ಉಸ್ತಾನಿಯಾ, (2 ವರ್ಷಗಳ ಕೋರ್ಸ್) ಫೌಕಾನಿಯಾ (3 ವರ್ಷಗಳ ಕೋರ್ಸ್), ಅಫ್ಜಲ್-ಉಲ್-ಉಲ್ಮಾ ಮಧ್ಯಮ (3 ವರ್ಷದ ಕೋರ್ಸ್) ಮತ್ತು ಅಫ್ಜಲ್-ಉಲ್-ಉಲ್ಮಾ ಉತ್ತಮ (2 ವರ್ಷದ ಕೋರ್ಸ್) ಕೋರ್ಸ್‌ಗಳ ಅಂತಿಮ ವರ್ಷದ ಪರೀಕ್ಷೆಯನ್ನು ಮಂಡಲಿ ವತಿಯಿಂದ ನಡೆಸಲಾಗುವುದು.

## III. ತೇರ್ಗಡೆ ನಿಯಮಗಳು:-

ಅಭ್ಯರ್ಥಿಯು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಪ್ರತಿ ವಿಷಯದಲ್ಲಿ ಕನಿಷ್ಟ 30 ಅಂಕಗಳನ್ನು ಮತ್ತು ಒಟ್ಟಾರೆ ವಿಷಯಗಳ ಅಂಕಗಳನ್ನು ಸೇರಿಸಿ 35 ಅಂಕಗಳನ್ನು ಪಡೆದಿರಬೇಕು. ಪರೀಕ್ಷಾ ಶ್ರೇಣಿಗಳನ್ನು ಈ ಕೆಳಕಂಡಂತೆ ನಿರ್ಧರಿಸಲಾಗುವುದು.

1. 30 to 49% - Pass Class
2. 50-59% - Second Class
3. 60 to 80% - First Class
4. Above 80% - Distinction

## IV. ಪರೀಕ್ಷಾ ಶುಲ್ಕದ ವಿವರ

| ಕ್ರಸಂ. | ಪರೀಕ್ಷೆಗಳ ವಿವರ | ಒಟ್ಟು ಶುಲ್ಕ |
|---|---|---|
| 1 | ಉಸ್ತಾನಿಯಾ | 286-00 |
| 2 | ಫೌಕಾನಿಯಾ | 442-00 |
| 3 | ಅಫ್ಜಲುಲ್-ಉಲ್ಮಾ ಮಧ್ಯಮ | 598-00 |
| 4 | ಅಫ್ಜಲುಲ್-ಉಲ್ಮಾ ಉತ್ತಮ | 754-00 |

## V. ಖಾಸಗಿ ಅಭ್ಯರ್ಥಿಯ ನೋಂದಣಿ :-

ಖಾಸಗಿಯಾಗಿ ಪರೀಕ್ಷೆ ಬರೆಯಲು ಇಚ್ಛಿಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ಅರೇಬಿಕ್ ಶಿಕ್ಷಣ ಸಂಸ್ಥೆಗಳ ಮೂಲಕ ತಮ್ಮ ಹೆಸರುಗಳನ್ನು "ಖಾಸಗಿ ಅಭ್ಯರ್ಥಿ" ಎಂದು ನೋಂದಾಯಿಸಿಕೊಳ್ಳುವುದು. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ನಿಗದಿಪಡಿಸಿದ ಅರ್ಹತೆಯೊಂದಿಗೆ ಆಯಾ ಪರೀಕ್ಷೆಗೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ನೊಂದಣಿ ಶುಲ್ಕ ರೂ. 125-00 ಗಳನ್ನು ಪಾವತಿಸುವುದು.

ಮಂಡಳಿಯಿಂದ ನಡೆಸಲಾಗುವ ಉಸ್ತಾನಿಯಾ, ಫೌಕಾನಿಯಾ, ಅಫ್ಜಲುಲ್-ಉಲ್ಮಾ ಮಧ್ಯಮ ಹಾಗೂ ಅಫ್ಜಲುಲ್-ಉಲ್ಮಾ ಉತ್ತಮ ಪರೀಕ್ಷೆಗಳ 1 ಅಥವಾ 2 ವಿಷಯಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು, ಆ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆದರೆ, ಸದರಿ ವಿಷಯಗಳನ್ನು ಮುಂದಿನ 2 ವರ್ಷಗಳಲ್ಲಿ ಉತ್ತೀರ್ಣರಾಗಬೇಕು. ಅನುತ್ತೀರ್ಣ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕದ ವಿವರ ಕೆಳಕಂಡಂತಿದೆ.

| ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕದ ವಿವರ (ರೂ ಗಳಲ್ಲಿ) | |
|---|---|---|
| | ಒಂದು ವಿಷಯಕ್ಕೆ | ಎರಡು ವಿಷಯಕ್ಕೆ |
| 1) ಉಸ್ತಾನಿಯಾ | 60–00 | 120–00 |
| 2) ಫೌಕಾನಿಯಾ | 80–00 | 160–00 |
| 3) ಅಫ್ಜಲುಲ್–ಉಲ್ಮಾ ಮಧ್ಯಮ | 105–00 | 210–00 |
| 4) ಅಫ್ಜಲುಲ್–ಉಲ್ಮಾ ಉತ್ತಮ | 140–00 | 280–00 |

ಎರಡು ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡ ಅಭ್ಯರ್ಥಿಗಳು ಸಂಬಂಧಿಸಿದ ಪರೀಕ್ಷೆಯ ಪೂರ್ಣ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

## VI. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ:–

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯನ್ನು ಅರೇಬಿಕ್ ಶಾಲಾ, ಕಾಲೇಜುಗಳ ಮುಖ್ಯಸ್ಥರು ಮಂಡಳಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಕ್ರೆಡಿಟ್‌ಕಾರ್ಡ್/ಡೆಬಿಟ್‌ಕಾರ್ಡ್/ನೆಟ್ ಬ್ಯಾಂಕಿಂಗ್ ಮೂಲಕ ಆನ್‌ಲೈನ್‌ನಲ್ಲಿ ಪಾವತಿಸುವ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ, ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಡಯಟ್ ಪ್ರಾಂಶುಪಾಲರ ಮೂಲಕ ಮಂಡಲಿಗೆ ಸಲ್ಲಿಸುವುದು.
- ಆನ್‌ಲೈನ್ ಪಾವತಿ ಹೊರತುಪಡಿಸಿ ಮತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ವಿದ್ಯಾರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
- ಮಂಡಳಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇರುತ್ತದೆ. ಪರೀಕ್ಷಾ ಶುಲ್ಕದಿಂದ ವಿನಾಯಿತಿ ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಸಲ್ಲಿಸುವುದು.

## VII. ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಶಾಲಾ, ಕಾಲೇಜುಗಳ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:–

- ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿಮಾಡಲು ಅನುಕೂಲವಾಗುವಂತೆ FLOW CHART ನೀಡಲಾಗುವುದು, ಇದನ್ನು ಕಡ್ಡಾಯವಾಗಿ ಓದಿಕೊಂಡು ಸರಿಯಾದ ಮಾಹಿತಿಗಳನ್ನು ಭರ್ತಿಮಾಡುವುದು.
- ಫೆಬ್ರವರಿ 2023ರ ಅರೇಬಿಕ್ ಮುಖ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಮಾಹಿತಿಯನ್ನು https://sslc.karnataka.gov.in ಮಂಡಲಿಯ ಜಾಲತಾಣದಲ್ಲಿ Other Exams Portal/Arabic Examination ನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.
- ಹೊಸದಾಗಿ ಪ್ರಾರಂಭಿಸುವ ಮಾನ್ಯತೆ ಪಡೆದ ಅರೇಬಿಕ್ ಶಾಲೆಗಳು/ಕಾಲೇಜುಗಳು ಶಾಲಾ ಸಂಕೇತ ಪಡೆಯಲು ಸಂಬಂದಿಸಿದ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆದ ಪ್ರತಿ ಹಾಗೂ ಮಂಡಳಿಗೆ ರೂ. 10,000/– ನೋಂದಣಿ ಶುಲ್ಕವನ್ನು NEFT Challan (Other Exams) ಮುಖಾಂತರ ಪಾವತಿಸಿ ದಿನಾಂಕ: 30/12/2022 ರೊಳಗೆ ಸಲ್ಲಿಸಿ ಶಾಲಾ ಸಂಕೇತ ಪಡೆಯುವುದು.

- ಈಗಾಗಲೇ ನೋಂದಾಯಿಸಿರುವ ಅರೇಬಿಕ್ ಶಾಲಾ ಕಾಲೇಜುಗಳು ನೋಂದಣಿ ನವೀಕರಣ ಶುಲ್ಕ ಪಾವತಿಸಲು ಸಂಸ್ಥೆಯ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನವೀಕರಣ ಶುಲ್ಕವನ್ನು ಆನ್‌ಲೈನ್‌ನಲ್ಲಿ ಕ್ರೆಡಿಟ್‌ಕಾರ್ಡ್/ಡೆಬಿಟ್‌ಕಾರ್ಡ್/ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸಬಹುದಾಗಿರುತ್ತದೆ. ಶುಲ್ಕ ಪಾವತಿಸಿದ ಆನ್‌ಲೈನ್ ಚಲನ್ ಪ್ರತಿಯ ಹಾರ್ಡ್ ಪ್ರತಿಯನ್ನು ಡಯಟ್‌ಗಳಿಗೆ ಸಲ್ಲಿಸಬೇಕು. ಡಯಟ್ ಲಾಗಿನ್‌ನಲ್ಲಿ ಅನುಮೋದಿಸಿದ ನಂತರವಷ್ಟೇ ವಿದ್ಯಾರ್ಥಿಗಳ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

- ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ನಿಗಧಿಪಡಿಸಿದ ದಿನಾಂಕದೊಳಗೆ ತಿದ್ದುಪಡಿ ಮಾಡಿಕೊಳ್ಳಲು ಸಂಸ್ಥೆಯ ಲಾಗಿನ್‌ನಲ್ಲಿ Update Application Option ನೀಡಲಾಗಿದೆ. ಡಯಟ್ ಅನುಮೋದನೆಗಿಂತ ಮೊದಲು ತಮ್ಮ ಸಂಸ್ಥೆಯ ಲಾಗಿನ್‌ನಲ್ಲಿ ತಿದ್ದುಪಡಿಗಳನ್ನು ಮಾಡಬಹುದಾಗಿದ್ದು ಡಯಟ್ ಸಂಸ್ಥೆಯವರು ಅನುಮೋದನೆ ಮಾಡಿದ ನಂತರ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

- ನಿಗಧಿಪಡಿಸಿದ ದಿನಾಂಕದ ನಂತರ ಯಾವುದೇ ತಿದ್ದುಪಡಿಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಮಂಡಲಿಯ ಗಮನಕ್ಕೆ ತಂದು ರೂ. 200/- ದಂಡ ಶುಲ್ಕ ಪಾವತಿಸಿ ಸರಿಪಡಿಸಿಕೊಳ್ಳುವುದು. ಈ ಬಗ್ಗೆ ಮಂಡಲಿಯ ನಿರ್ಧಾರ (ತಿದ್ದುಪಡಿ ಮಾಡುವ/ಮಾಡದೇ ಇರುವ ಬಗ್ಗೆ) ಅಂತಿಮವಾಗಿರುತ್ತದೆ.

- ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಸಂಸ್ಥೆಯ ಮುಖ್ಯಸ್ಥರ ಅಂಚೆ ವಿಳಾಸ, ಮೊಬೈಲ್ ಪೋನ್ ಸಂಖ್ಯೆ ಹಾಗೂ E-Mail ವಿಳಾಸವನ್ನು ಭರ್ತಿ ಮಾಡಲು ಅವಕಾಶ ನೀಡಲಾಗಿದ್ದು ಇದನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

- **ಪರೀಕ್ಷಾ ಅರ್ಜಿಗಳನ್ನು ಮಂಡಲಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳ ಇತ್ತೀಚಿನ ನೇರಭಂಗಿಯ ಭಾವಚಿತ್ರ 60 KB ಯಿಂದ 80 KB JPEG ನಮೂನೆಯಲ್ಲಿ ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.**

- **ಭಾವಚಿತ್ರ ಮತ್ತು ಸಹಿಯನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್‌ಲೋಡ್ ಮಾಡಬೇಕೆ ಹೊರತು ಇಡಿ ಪೇಪರ್ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ.**

- ಆನ್‌ಲೈನ್‌ನಲ್ಲಿ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದ್ದಲ್ಲಿ ಅಂತಹ ಸಂಸ್ಥೆಯ ಮುಖ್ಯಸ್ಥರ ಮೇಲೆ ಮಂಡಲಿಯ ಪರೀಕ್ಷಾ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೆ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

- ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಶಾಲಾ/ಕಾಲೇಜುಗಳ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಶಾಲಾ/ಕಾಲೇಜುಗಳ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

## VIII. ನಾಮಿನಲ್ ರೋಲ್:-

2022-23ನೇ ಸಾಲಿಗೆ ಹೊಸದಾಗಿ ನೋಂದಣಿಯಾದ ಅಭ್ಯರ್ಥಿಗಳು ಮತ್ತು ಪುನರಾವರ್ತಿತ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ನಾಮಿನಲ್ ರೋಲ್‌ಗಳನ್ನು Download ಮಾಡಿಕೊಂಡು ಸಂಬಂಧಪಟ್ಟ ಶಾಲೆ ಅಥವಾ ಕಾಲೇಜುಗಳ ಮುಖ್ಯಸ್ಥರು ಡಯಟ್ ಪ್ರಾಂಶುಪಾಲರಿಂದ ಅನುಮೋದನೆ ಪಡೆದು ಹಾರ್ಡ್ ಪ್ರತಿಯನ್ನು ಮಂಡಲಿಗೆ ಸಲ್ಲಿಸುವುದು.

## IX.ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ:-

| ಕ್ರ.ಸಂ | ವಿವರ | ದಿನಾಂಕ |
|---|---|---|
| 1. | ಅಧಿಸೂಚನೆ ಪ್ರಕಟಿಸುವ ದಿನಾಂಕ | 02/01/2023 |
| 2. | ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣದ ಪ್ರತಿಯನ್ನು ಸಂಸ್ಥೆಯ ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಸಂಸ್ಥೆಯ ನೋಂದಣಿ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಲು ಪ್ರಾರಂಭದ ದಿನಾಂಕ | 02/01/2023 |
| 3. | ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣದ ಪ್ರತಿಯನ್ನು ಡಯಟ್ ಪ್ರಾಂಶುಪಾಲರು ಡಯಟ್ ಲಾಗಿನ್‌ನಲ್ಲಿ ಅನುಮೋದಿಸಲು ಪ್ರಾರಂಭದ ದಿನಾಂಕ | 02/01/2023 |
| 4. | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭದ ದಿನಾಂಕ | 09/01/2023 |
| 5. | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 23/01/2023 |
| 6. | ದಂಡ ಶುಲ್ಕದೊಂದಿಗೆ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ದಿನಾಂಕ (ದಿನವೊಂದಕ್ಕೆ 150 ರೂನಂತೆ) | 24/01/2023 ರಿಂದ 27/01/2023 |
| 7. | ಫೆಬ್ರವರಿ 2023ರ ಅರೇಬಿಕ್ ಪರೀಕ್ಷೆಗೆ ಆನ್‌ಲೈನ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿಸಲು ಪ್ರಾರಂಭ ದಿನಾಂಕ | 28/01/2023 |
| 8. | ಫೆಬ್ರವರಿ 2023ರ ಅರೇಬಿಕ್ ಪರೀಕ್ಷೆಗೆ ಆನ್‌ಲೈನ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 30/01/2023 |
| 9. | ಡಯಟ್ ಲಾಗಿನ್‌ನಲ್ಲಿ ಪರೀಕ್ಷಾ ಅರ್ಜಿಗಳನ್ನು ಅನುಮೋದಿಸುವ ದಿನಾಂಕ | 01/02/2023 ರಿಂದ 04/02/2023 |
| 10. | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಸಂಸ್ಥೆಗಳಿಂದ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 04/02/2023 |
| 11. | ಪ್ರವೇಶ ಪತ್ರಗಳನ್ನು ಆನ್‌ಲೈನ್ ನಲ್ಲಿ ಪ್ರಕಟಿಸುವ ದಿನಾಂಕ | 08/02/2023 |
| 12. | ಪ್ರವೇಶ ಪತ್ರದಲ್ಲಿ ತಿದ್ದುಪಡಿ ಮಾಡಲು (ದಂಡ ಶುಲ್ಕ ರೂ. 200/-) ನಿಗದಿಪಡಿಸಿದ ಅಂತಿಮ ದಿನಾಂಕ | 10/02/2023 |
| 13. | ಪರೀಕ್ಷೆ ನಡೆಯುವ ದಿನಾಂಕ | 20/02/2023 ರಿಂದ 25/02/2023 |

## X. ಪರೀಕ್ಷಾ ಅವ್ಯವಹಾರಗಳಿಂದ ಉಚ್ಚಾಟಿಸಿರುವ (ಎಂ.ಎಲ್.ಪಿ) ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳ ಬಗ್ಗೆ:-

ಪರೀಕ್ಷೆಯಲ್ಲಿ ಅವ್ಯವಹಾರಗಳನ್ನು ನಡೆಸಿ ಉಚ್ಚಾಟನೆಗೊಂಡಿರುವ ವಿದ್ಯಾರ್ಥಿಗಳ ಉಚ್ಚಾಟನಾ ವರ್ಷಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ವಿದ್ಯಾರ್ಥಿಗಳು ಫೆಬ್ರವರಿ 2023ರ ಪರೀಕ್ಷೆ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್‌ರೋಲ್ ಸಲ್ಲಿಸುವುದು. ಮಂಡಲಿಯಿಂದ ಹೊರಡಿಸಿರುವ ಜ್ಞಾಪನ ಆದೇಶದ ಪ್ರತಿ ಲಗತ್ತಿಸುವುದು. ನಾಮಿನಲ್‌ರೋಲ್‌ನಲ್ಲಿ ದಪ್ಪ ಅಕ್ಷರದಲ್ಲಿ (Block Letters) ಕೆಂಪು ಶಾಹಿಯಲ್ಲಿ ನಮೂದಿಸಬೇಕು.

## XI.ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಮತ್ತು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ:-

ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಅಭ್ಯರ್ಥಿಗಳಿಗೆ ಸರ್ಕಾರದ ಪತ್ರ ಸಂಖ್ಯೆ: ಇಡಿ 98/ಇಎಸ್‌ಡಬ್ಲ್ಯೂ 2009, ದಿನಾಂಕ: 10/06/2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರ ಸೌಲಭ್ಯಗಳನ್ನು ನೀಡುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮಕೈಗೊಳ್ಳುವುದು. ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಲಾಗುವುದು.

XII. ಲಿಖಿತ ಪರೀಕ್ಷೆಗೆ ನಿಗಧಿಪಡಿಸಲಾಗಿರುವ ವಿಷಯಗಳ ವಿವರ, ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ:-

**USTHANIYA EXAMINATION**

| Date & Day | Sub Code | Papers | Max Marks | Duration | Time |
|---|---|---|---|---|---|
| 20/02/2023 Monday | U-1 | Arabic Prose and Poetry | 100 | 2.30 Hrs | 10.00AM- 12.30PM |
| | U-2 | Arabic Grammar & Insha | 100 | 2.30 Hrs | 02.00PM - 04.30PM |
| 21/02/2023 Tuesday | U-3 | Deeniyath & Islamic History | 100 | 2.30 Hrs | 10.00AM- 12.30PM |
| | U-4 | Urdu & Kannada | 100 | 2.30 Hrs | 02.00PM - 04.30PM |
| 22/02/2023 Wednesday | U-5 | English (7th Stad Text book) | 100 | 2.30 Hrs | 10.00AM - 12.30PM |

**FOUQANIYA EXAMINATION**

| Date & Day | Sub Code | Papers | Max Marks | Duration | Time |
|---|---|---|---|---|---|
| 20/02/2023 Monday | F-1 | Arabic Prose and Poetry | 100 | 3.00Hrs | 10.00AM - 1.00PM |
| | F-2 | Arabic Grammar | 100 | 3.00Hrs | 02.00PM - 5.00PM |
| 21/02/2023 Tuesday | F-3 | Persian | 100 | 3.00Hrs | 10.00AM - 1.00PM |
| | F-4 | Deeniyath & Islamic History | 100 | 3.00Hrs | 02.00PM - 5.00PM |
| 22/02/2023 Wednesday | F-5 | Urdu & Kannada | 100 | 3.00Hrs | 10.00AM - 1.00PM |
| | F-6 | English (10th std Text book) | 100 | 3.00Hrs | 02.00PM - 5.00PM |

**AFZALUL –ULMA – MADHYAMA EXAMINATION**

| Date & Day | Sub Code | Papers | Max Marks | Duration | Time |
|---|---|---|---|---|---|
| 20/02/2023 Monday | AFM-1 | Tafseer-o-Hadis | 100 | 3.00Hrs | 10.00AM - 1.00PM |
| 21/02/2023 Tuesday | AFM-2 | Fiqha-o-Aqayed | 100 | 3.00Hrs | 10.00AM - 1.00PM |
| 22/02/2023 Wednesday | AFM-3 | Arabi Adab Aur Seerath | 100 | 3.00Hrs | 10.00AM - 1.00PM |
| 23/02/2023 Thursday | AFM-4 | Tareekh-e-Adab-e-Arabi | 100 | 3.00Hrs | 10.00AM - 1.00PM |
| 24/02/2023 Friday | AFM-5 | Qawa'id-o-Balaghat | 100 | 3.00Hrs | 10.00AM - 1.00PM |
| 25/02/2023 Saturday | AFM-6 | Persian and Urdu | 100 | 3.00Hrs | 10.00AM - 1.00PM |

| AFZALUL –ULMA – UTTAMA EXAMINATION | | | | | |
|---|---|---|---|---|---|
| 20/02/2023 Monday | AFU-1 | Tafseer, Hadis Aur fiqa | 75 | 3.00Hrs | 10.00AM - 1.00PM |
| 21/02/2023 Tuesday | AFU -2 | Qadeem-wa-Jadeed Arabi Shaeeri | 75 | 3.00Hrs | 10.00AM - 1.00PM |
| 22/02/2023 Wednesday | AFU -3 | Kisi ek musaniff ka Khusoosi mutala (specialization on study of an author) | 75 | 3.00Hrs | 10.00AM - 1.00PM |
| 23/02/2023 Thursday | AFU -4 | Tareekh E Adab Arabi | 75 | 3.00Hrs | 10.00AM - 1.00PM |
| 24/02/2023 Friday | AFU -5 | Adabi tanqeed | 75 | 3.00Hrs | 10.00AM - 1.00PM |
| 25/02/2023 Saturday | AFU -6 | Persian and Urdu | 75 | 3.00Hrs | 10.00AM - 1.00PM |

## XIII. ಡಯಟ್ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿಗಳ ಕರ್ತವ್ಯಗಳು ಹಾಗೂ ಗಮನಿಸಬೇಕಾದ ಅಂಶಗಳು:–

- ಅರೇಬಿಕ್ ಶಾಲಾ/ಕಾಲೇಜುಗಳು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಮಾನ್ಯತೆ ಪಡೆಯದ ಸಂಸ್ಥೆಗಳ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

- ಅರೇಬಿಕ್ ಶಾಲಾ/ಕಾಲೇಜುಗಳು ಮಾನ್ಯತೆ ನವೀಕರಣ ಶುಲ್ಕ ರೂ. 1,000/– ಪಾವತಿಸಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಅನುಮೋದನೆ ಮಾಡಬೇಕು.

- ನವೀಕರಣ ಶುಲ್ಕ ಪಾವತಿಸದೇ ಇರುವ ಶಾಲಾ/ಕಾಲೇಜುಗಳ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

- ಈಗಾಗಲೇ ಶಾಲಾ/ಕಾಲೇಜುಗಳು ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ ಸಂಸ್ಥೆ ನಡೆಯುತ್ತಿರಬೇಕು. ಯಾವುದೇ ಮಾಹಿತಿ ಮಂಡಳಿಗೆ ನೀಡದೆ ವಿಳಾಸ ಮತ್ತು ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ.

- ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಯು ದಾಖಲಾತಿಗೆ ಅರ್ಹರಾಗಿದ್ದಾರೆಯೇ ಎಂಬುದನ್ನು ಖಾತ್ರಿ ಪಡಿಸಿಕೊಂಡು ಅನುಮೋದಿಸುವುದು.

- ಶಾಲಾ ಕಾಲೇಜುಗಳಿಂದ ನೋಂದಣಿಯಾದ ಅಭ್ಯರ್ಥಿಗಳ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದಿಸಿರಬೇಕು. ಅನುಮೋದಿತ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರು ಮಾತ್ರ Nominal Roll ನಲ್ಲಿ ಇರಬೇಕು.

- ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗಿಲ್ಲದೇ ಇರುವ ಅಭ್ಯರ್ಥಿಯು ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಶಾಲಾ /ಕಾಲೇಜುಗಳು ಸಲ್ಲಿಸಿರುವ ನಾಮಾಯಾದಿ ಪಟ್ಟಿಯನ್ನು ದೃಢೀಕರಿಸಿ ಮಂಡಳಿಗೆ ಕಳುಹಿಸುವುದು.

- ಡಯಟ್ ಹಂತದಲ್ಲಿ ಶಾಲಾ ಕಾಲೇಜುಗಳಿಂದ ಸ್ವೀಕರಿಸಲಾದ ನೋಂದಣಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಆನ್‌ಲೈನ್ ಪಾವತಿಯ ಚಲನ್‌ಗಳನ್ನು ಪರಿಶೀಲಿಸಿ ಚಲನ್‌ಗಳನ್ನು ಕ್ರೋಢೀಕರಿಸಿ ಮಂಡಲಿಗೆ ಕಳುಹಿಸುವುದು.

➢ ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಳಿಯ ಹಂತದಲ್ಲಿ ಪರಿಶೀಲಿಸಿ ಸಂಸ್ಥೆಯ ಲಾಗಿನ್‌ಗೆ ಪ್ರವೇಶ ಪತ್ರಗಳನ್ನು ಅಪ್‌ಲೋಡ್ ಮಾಡಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅದನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲಿಸುವುದು ಮತ್ತು ದೋಷಗಳಿದ್ದಲ್ಲಿ ಸೂಚಿಸಲ್ಪಟ್ಟ ನಿಗದಿತ ದಿನಾಂಕದೊಳಗೆ ಸರಿಪಡಿಸುವುದು ಕಡ್ಡಾಯವಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಮಾಹಿತಿಗಳು ನಿಯಮಾನುಸಾರ ಸರಿಯಾಗಿದೆ ಎಂದು ಖಚಿತಪಡಿಸಿಕೊಂಡ ನಂತರವಷ್ಟೇ ಡಯಟ್ ಲಾಗಿನ್‌ನಲ್ಲಿ ಪ್ರಾಂಶುಪಾಲರು ಅನುಮೋದಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ:–

1. ಶ್ರೀಮತಿ. ಟಿ.ಡಿ.ಶೈಲ, ಸಹಾಯಕ ನಿರ್ದೇಶಕರು, ಅರೇಬಿಕ್ ಶಾಖೆ, ಮೊಬೈಲ್ ಸಂಖ್ಯೆ: **9480343741**

2. ಶ್ರೀ. ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ, ಮೊಬೈಲ್ ಸಂಖ್ಯೆ: **7892195954**

[ಹೆಚ್.ಎನ್ ಗೋಪಾಲಕೃಷ್ಣ]
ನಿರ್ದೇಶಕರು (ಪರೀಕ್ಷೆಗಳು)

ಪ್ರತಿಗಳು :–

1. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯದರ್ಶಿಗಳು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು ರವರ ಆಪ್ತಶಾಖೆಗೆ ಮಾಹಿತಿಗಾಗಿ.
3. ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗ ರವರಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಸಂಬಂಧಿಸಿದ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
6. ರಾಜ್ಯದ ಎಲ್ಲಾ ಅರೇಬಿಕ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಪ್ರತಿ.